I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದಲ್ಲಿ ಬ್ರಿಟಿಷರು ಹೂಡಿದ ಕೈಗಾರಿಕಾ ಬಂಡವಾಳದಿಂದ

   (A) ಭಾರತೀಯ ಕೈಗಾರಿಕೆಗಳು ಅಭಿವೃದ್ಧಿಗೊಂಡವು

   (B) ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಉಂಟಾಯಿತು

   (C) ಭಾರತದ ಸಂಪತ್ತಿನ ಸೋರಿಕೆಗೆ ಕಾರಣವಾಯಿತು

   (D) ಭಾರತದ ನಿರುದ್ಯೋಗಿ ಕುಶಲ ಕರ್ಮಿಗಳಿಗೆ ಉದ್ಯೋಗ ದೊರಕಿತು

2. **A ಪಟ್ಟಿ**ಯಲ್ಲಿರುವ ನಾಯಕರು ಮತ್ತು **B ಪಟ್ಟಿ**ಯಲ್ಲಿ ಸ್ವತಂತ್ರ ಭಾರತದಲ್ಲಿ ಅವರು ಹೊಂದಿದ ಹುದ್ದೆಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಮೌಂಟ್ ಬ್ಯಾಟನ್ | (i) ಪ್ರಧಾನ ಮಂತ್ರಿ |
| (b) ಜವಾಹರಲಾಲ್ ನೆಹರೂ | (ii) ಗೃಹ ಮಂತ್ರಿ |
| (c) ಡಾ. ಬಾಬು ರಾಜೇಂದ್ರ ಪ್ರಸಾದ್ | (iii) ಗವರ್ನರ್ ಜನರಲ್ |
| (d) ಸರ್ದಾರ್ ವಲ್ಲಭಬಾಯಿ ಪಟೇಲ್ | (iv) ರಾಷ್ಟ್ರಪತಿ |

| | ***a*** | ***b*** | ***c*** | ***d*** |
|---|---|---|---|---|
| (A) | ii | iv | i | iii |
| (B) | iii | i | iv | ii |
| (C) | i | ii | iii | iv |
| (D) | iv | iii | ii | i |

3. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಅದನ್ನು ತನ್ನ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದು ..................... .

(A) ಗುಲಾಮಗಿರಿ (B) ವರ್ಣಭೇದ ನೀತಿ

(C) ಶೀತಲ ಸಮರ (D) ವಸಾಹತುಶಾಹಿತ್ವ

4. 1947 ರಲ್ಲಿ ಭಾರತ ಮತ್ತು ಪಾಕಿಸ್ತಾನ ಯುದ್ಧ ನಡೆದಾಗ ವಿಶ್ವಸಂಸ್ಥೆ ಕದನ ವಿರಾಮವನ್ನು ಘೋಷಿಸಿತು. ಏಕೆಂದರೆ ಅದು

(A) ಯುದ್ಧವನ್ನು ವಿರೋಧಿಸುತ್ತದೆ

(B) ಅಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡುತ್ತದೆ

(C) ಯುದ್ಧಕ್ಕೆ ಸಿದ್ಧತೆಯನ್ನು ಬಯಸುತ್ತದೆ

(D) ಯುದ್ಧ ಘೋಷಣೆಗೆ ವಿಶ್ವಸಂಸ್ಥೆಯ ಅನುಮತಿ ಬೇಕಾಗುತ್ತದೆ

5. ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿಗಳು ಶಾಲಾ ಮೈದಾನ ಸ್ವಚ್ಛಗೊಳಿಸುತ್ತಿದ್ದಾರೆ. ಇದು

(A) ಕೂಲಿ ರಹಿತ ದುಡಿಮೆ (B) ಕೂಲಿ ಸಹಿತ ದುಡಿಮೆ

(C) ಸಂಘಟಿತ ದುಡಿಮೆ (D) ಅಸಂಘಟಿತ ದುಡಿಮೆ

6. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟುವ ಉದ್ದೇಶದಿಂದ

(A) ಕುಟುಂಬ ಯೋಜನೆಯನ್ನು ಜಾರಿಗೆ ತರಲಾಗಿದೆ

(B) ಹೆಣ್ಣು ಮಕ್ಕಳಿಗೆ ಮೀಸಲಾತಿ ಕಲ್ಪಿಸಲಾಗಿದೆ

(C) ಸ್ಕ್ಯಾನಿಂಗ್ ಸೆಂಟರ್‌ಗಳು ಭ್ರೂಣದ ಲಿಂಗ ಪತ್ತೆ ಹಚ್ಚುವುದನ್ನು ನಿರ್ಬಂಧಿಸಲಾಗಿದೆ

(D) ಮಕ್ಕಳ ಹಕ್ಕು ಕಾಯಿದೆಯನ್ನು ಜಾರಿಗೆ ತರಲಾಗಿದೆ

7. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಲಾಗಿದೆ. ಏಕೆಂದರೆ

(A) ಹೊಗೆಸೊಪ್ಪು ಸೇವನೆ ಆರೋಗ್ಯಕ್ಕೆ ಹಾನಿಕಾರಕ

(B) ಸಾರ್ವಜನಿಕ ಸ್ಥಳಗಳ ಶುಚಿತ್ವ ಕಾಪಾಡಲು

(C) ಹೊಗೆಸೊಪ್ಪಿನ ಉತ್ಪಾದನೆಗೆ ಲೈಸೆನ್ಸ್ ಬೇಕಾಗಿರುವುದರಿಂದ

(D) ಹೊಗೆಸೊಪ್ಪನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಗಿದೆ

8. ಈ ನಕ್ಷೆಯಲ್ಲಿ ಗುರುತಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಕ್ರಮವಾಗಿ ಹೋಲಿಕೆಯಾಗುವುದು :




(A) 1 — ಅಮೃತಸರ, 2 — ಹೈದರಾಬಾದ್, 3 — ಮುಂಬೈ, 4 — ಗೌಹಾಟಿ

(B) 1 — ಮುಂಬೈ, 2 — ಗೌಹಾಟಿ, 3 — ಅಮೃತಸರ, 4 — ಹೈದರಾಬಾದ್

(C) 1 — ಹೈದರಾಬಾದ್, 2 — ಮುಂಬೈ, 3 — ಗೌಹಾಟಿ, 4 — ಅಮೃತಸರ

(D) 1 — ಗೌಹಾಟಿ, 2 — ಅಮೃತಸರ, 3 — ಹೈದರಾಬಾದ್, 4 — ಮುಂಬೈ

9. 'ಬ್ಯಾಂಕುಗಳ ಬ್ಯಾಂಕು' ಎಂದು ಕರೆಯಲ್ಪಡುವುದು

(A) ಕೈಗಾರಿಕಾ ಅಭಿವೃದ್ಧಿ ಬ್ಯಾಂಕು

(B) ಭೂ ಅಭಿವೃದ್ಧಿ ಬ್ಯಾಂಕು

(C) ಎಕ್ಸಿಂ ಬ್ಯಾಂಕು

(D) ಭಾರತೀಯ ರಿಸರ್ವ್ ಬ್ಯಾಂಕ್

10. ಇವರು ಭಾರತ ಸರ್ಕಾರದ 'ತೆರೆದ ಅಂತರಿಕ್ಷ ನೀತಿ'ಯನ್ನು ಸದುಪಯೋಗಪಡಿಸಿಕೊಂಡ ಉದ್ಯಮಿ

(A) ಡಾ. ಪ್ರತಾಪ ರೆಡ್ಡಿ

(B) ನರೇಶ್ ಗೋಯಲ್

(C) ನಾರಾಯಣಮೂರ್ತಿ

(D) ಧೀರುಭಾಯಿ ಅಂಬಾನಿ

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. 1909 ರಲ್ಲಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ರಚಿಸಲು ಕಾರಣ

   (A) ಮುಸ್ಲಿಂರಿಗಾಗಿ ಪ್ರತ್ಯೇಕ ಪ್ರಾತಿನಿಧ್ಯ ನೀಡಲು

   (B) ಯೂರೋಪಿಯನ್ನರಿಗೆ ಪ್ರತ್ಯೇಕ ಕ್ಷೇತ್ರ ರಚಿಸಲು

   (C) ಸಿಖ್‌ರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು

   (D) ಕ್ರೈಸ್ತರಿಗೆ ಕೆಲ ಸ್ಥಾನಗಳ ಮೀಸಲು ನೀಡಲು

2. ಮೊದಲನೆಯ ಆಂಗ್ಲೋ–ಮೈಸೂರು ಯುದ್ಧವನ್ನು ಕೊನೆಗೊಳಿಸಿದ್ದು

   (A) ಮೈಸೂರು ಒಪ್ಪಂದ (B) ಮದ್ರಾಸ್ ಒಪ್ಪಂದ

   (C) ಮಂಗಳೂರು ಒಪ್ಪಂದ (D) ಶ್ರೀರಂಗಪಟ್ಟಣ ಒಪ್ಪಂದ

3. 'ನ್ಯೂ ಇಂಡಿಯಾ' ವೃತ್ತ ಪತ್ರಿಕೆಯನ್ನು ಆರಂಭಿಸಿದವರು

   (A) ರಾಜಾ ರಾಮ್‌ಮೋಹನ ರಾಯ್ (B) ಮಹಾತ್ಮ ಗಾಂಧೀಜಿ

   (C) ಅನಿಬೆಸೆಂಟ್ (D) ದಯಾನಂದ ಸರಸ್ವತಿ

4. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದ ವರ್ಷ

   (A) 1945 (B) 1950

   (C) 1947 (D) 1948

5. ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

   (A) ಅದು 15 ಖಾಯಂ ಸದಸ್ಯರನ್ನು ಹೊಂದಿದೆ

   (B) ಅದು ವಿಶ್ವಸಂಸ್ಥೆಯ ಸಚಿವ ಸಂಪುಟವಿದ್ದಂತೆ

   (C) ಅದು ಪ್ಯಾರಿಸ್‌ನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿದೆ

   (D) ಇತ್ತೀಚಿಗೆ ಭಾರತ ಖಾಯಂ ಸದಸ್ಯತ್ವ ಪಡೆದಿದೆ

6. 'ಕಾಣದ ಹಸಿವು' ಎಂದರೆ

(A) ಪೌಷ್ಠಿಕತೆ (B) ಅಪೌಷ್ಠಿಕತೆ

(C) ಶ್ರೀಮಂತರಲ್ಲಿ ಹಸಿವು (D) ಸಮತೋಲನ ಆಹಾರ

7. ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿರಲು ಕಾರಣ

(A) ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಉತ್ಪತ್ತಿಯಾಗಿದೆ

(B) ಕಡಿಮೆ ತೇವಾಂಶ ಸಂಗ್ರಹ ಸಾಮರ್ಥ್ಯ ಹೊಂದಿದೆ

(C) ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ

(D) ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ

8. ದಾಮೋದರ ನದಿಕಣಿವೆ ಯೋಜನೆಯ ನಿರ್ಮಾಣದಿಂದಾಗಿರುವ ಪರಿಣಾಮ

(A) ದಾಮೋದರ ನದಿಯು ಬಂಗಾಳದ ದುಃಖ ನದಿಯಾಗಿ ಉಳಿದಿಲ್ಲ

(B) ಭೂಕುಸಿತಗಳು ಹೆಚ್ಚಾಗಿವೆ

(C) ಬಲಿಷ್ಠ ಭೂಕಂಪನಗಳನ್ನು ಉಂಟುಮಾಡಿದೆ

(D) ಪ್ರಮುಖ ಕೈಗಾರಿಕಾ ಪ್ರದೇಶಗಳು ಮುಳುಗಡೆಯಾಗಿವೆ

9. ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ

(A) ಮೌಲ್ಯವರ್ಧಿತ ತೆರಿಗೆ

(B) ಕೇಂದ್ರ ಅಬಕಾರಿ ತೆರಿಗೆ

(C) ಸ್ಟ್ಯಾಂಪ್ ಶುಲ್ಕ

(D) ಸೇವಾ ತೆರಿಗೆ

10. ಒಬ್ಬ ವ್ಯಕ್ತಿಯು 15 ಲಕ್ಷ ಬೆಲೆ ಬಾಳುವ ಕಾರನ್ನು ಕೊಂಡಿರುತ್ತಾನೆ. ಆ ಕಾರಿನಲಿ ಕೆಲವು ತೊಂದರೆಗಳಿದ್ದರೂ ಆ ಕಾರು ಕಂಪನಿಯವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಆಗ ಆ ವ್ಯಕ್ತಿಯು ಯಾವ ವೇದಿಕೆ / ಆಯೋಗಕ್ಕೆ ದೂರು ಸಲ್ಲಿಸಬೇಕು ?

(A) ಜಿಲ್ಲಾ ಗ್ರಾಹಕರ ವೇದಿಕೆ

(B) ರಾಜ್ಯ ಗ್ರಾಹಕರ ಆಯೋಗ

(C) ರಾಷ್ಟ್ರೀಯ ಗ್ರಾಹಕರ ಆಯೋಗ

(D) ಅಂತರರಾಜ್ಯ ಗ್ರಾಹಕರ ವೇದಿಕೆ